## 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

## ಸ್ಪೆಷಲ್ ಕೇಸ್ ನಂ.256/2019

ಪ್ರಾ.ಸಾ. 2

ಚಾ.ಸಾ. 2

## ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 20.11.2024

| | |
|---|---|
| ಸಾಕ್ಷಿದಾರರ ಹೆಸರು | ಜಯರಾಮು |
| ತಂದೆಯ ಹೆಸರು | ಪುಟ್ಟ ಮಾದಯ್ಯ |
| ವಯಸ್ಸು | 36 ವರ್ಷ |
| ಉದ್ಯೋಗ | ಗಾರೆ ಕೆಲಸ |
| ವಾಸ | 6 ನೇ ಕ್ರಾಸ್, ಗಾಂಧಿನಗರ, ಮಂಡ್ಯ |

## ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ

1. ಚಾಸಾ.1 ನನ್ನ ತಂದೆ. ಚಾಸಾ.3 ನನ್ನ ಅಕ್ಕ. ಚಾಸಾ.4 ನನ್ನ ತಾಯಿ. ಚಾಸಾ.5 ನನ್ನ ಸೋದರ ಅತ್ತೆ, ಚಾಸಾ.6 ನನ್ನ ದೊಡ್ಡಮ್ಮ, ಚಾಸಾ.7 ನನ್ನ ಅಜ್ಜಿ. ನಾವು ಪರಿಶಿಷ್ಟ ಜಾತಿಗೆ ಸೇರಿದವರು. ಚಾಸಾ.8 ರಿಂದ 13 ರವರು ಗೊತ್ತು. ಆರೋಪಿತರು ಗೊತ್ತು. ಅವರು ಹುಲ್ಕೆರೆ ಗ್ರಾಮದವರು, ಅವರು ಒಕ್ಕಲಿಗರು. ನಾನು ಮಹೇಶ್ ಮೇಸ್ತ್ರಿಯವರ ಹತ್ತಿರ ನಾವು ಗಾರೆ ಕೆಲಸ ಮಾಡಿಕೊಂಡಿದ್ದೇನೆ. ನಮ್ಮ ತಾತನ ಕಾಲದಿಂದಲೂ ಗಾಂಧಿನಗರ, 6 ನೇ ಕ್ರಾಸ್ ನಲ್ಲಿ ಷೆಡ್ ಹಾಕಿಕೊಂಡು ಚಾಸಾ.1, 3 ರಿಂದ 7 ರವರು ವಾಸ ಇದ್ದೇವೆ. ನಮ್ಮ ಷೆಡ್ ಮುಂದೆ ನನ್ನ ಅಜ್ಜಿಯ ಇನ್ನೊಂದು ಷೆಡ್ ಇದೆ. ನಮ್ಮ ಜಾಗಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ. ಕೊಳಚೆ ನಿರ್ಮೂಲನಾ ಮಂಡಳಿಯವರು ಮನೆ ಕಟ್ಟಿಕೊಡುತ್ತೇವೆಂದು ನಮ್ಮ ಷೆಡ್ ಗಳನ್ನು ತೆರವುಗೊಳಿಸಿದ್ದರು. ಆಗ ಶಶಿಧರ್ 1 ನೇ

ಆರೋಪಿ ಜಾಗ ನನಗೆ ಸೇರಬೇಕೆಂದು ಪೊಲೀಸರಿಗೆ ದೂರನ್ನು ಕೊಟ್ಟಿದ್ದನು. ಕೊಳಚೆ ನಿರ್ಮೂಲನಾ ಮಂಡಳಿಯವರು ಮನೆಯನ್ನು ಕಟ್ಟಿಕೊಟ್ಟಿರಲಿಲ್ಲ, ಹೀಗಾಗಿ ನಾವೇ ವಾಸ ಮಾಡಲು ಮನೆ ಕಟ್ಟಿಕೊಳ್ಳುತ್ತಿದ್ದೆವು. ಈ ಸಂಬಂಧ ಚಾಸಾ.10 ಮಹೇಶ್ ಎಂಬ ಮೇಸ್ತ್ರಿಗೆ ಕೆಲಸ ವಹಿಸಿದ್ದೆವು.

2. ದಿನಾಂಕ 30.08.2019 ರಂದು ವಾಸ್ ಕಲ್ ನಿಲ್ಲಿಸಿ ಇಟ್ಟಿಗೆ ಗೋಡೆ ಕಟ್ಟಿದ್ದೆವು, 1 ನೇ ಆರೋಪಿ ನಮ್ಮ ಮೇಲೆ ದೂರು ಕೊಟ್ಟಿದ್ದರಿಂದ ಪೊಲೀಸರು ನನ್ನಂನ್ನು, ಚಾಸಾ.1, ಚಾಸಾ.3 ರಿಂದ 7 ಇವರನ್ನು ಠಾಣೆಗೆ ಕರೆಸಿದ್ದರು. ಅಷ್ಟರಲ್ಲಿ ಚಾಸಾ.10 ರವರು ನನ್ನ ಅಕ್ಕನಿಗೆ ಪೋನು ಮಾಡಿ ಸುಮಾರು 15-20 ಜನರು ನಮ್ಮ ಮನೆಯನ್ನು ಕಿತ್ತು ಹಾಕುತ್ತಿದ್ದಾರೆಂದು ಹೇಳಿದನು. ಆಗ ನಾನು ಸ್ಥಳಕ್ಕೆ ಬಂದಾಗ ಗೇಟ್ ಲಾಕ್ ಮಾಡಿಕೊಂಡು ಅವರೆಲ್ಲರೂ ಮನೆಯನ್ನು ಹಾರೆ, ರೀಪೀಸ್ ಪಟ್ಟಿ ತಂದು ಉರುಳಿಸುತ್ತಿದ್ದರು, ನಾವು ಕೇಳಿದ್ದಕ್ಕೆ ಅವರು ಹೊಲೆಯ ಸೂಳೆ ಮಕ್ಕಳಾ ಜಾಗ ನಮ್ಮದು ಎಂದು ಅವ್ಯಾಚ ಶಬ್ಧಗಳಿಂದ ಬೈದು, ಚಾಸಾ.7 ರವರಿಗೆ ಕೆಳಗೆ ಬೀಳಿಸಿ ಹೊಟ್ಟೆಯ ಮೇಲೆ ತುಳಿದರು, ಚಾಸಾ.1, 3 ರಿಂದ 6 ರವರಿಗೆ ಹೊಡೆದರು. ಅಷ್ಟರಲ್ಲಿ ಪೊಲೀಸರು ಸ್ಥಳಕ್ಕೆ ಬಂದು 15-20 ಜನರನ್ನು ಹಿಡಿದುಕೊಂಡರು. ನಂತರ ಚಾಸಾ.1 ರವರು ಪೊಲೀಸರಿಗೆ ದೂರು ಕೊಟ್ಟರು.

3. ಗಲಾಟೆಯಲ್ಲಿ ನನಗೆ, ನನ್ನ ಮನೆಯವರಿಗೆ ಪೆಟ್ಟು ಆಗಿದ್ದು ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಪ್ರಕರಣದ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಆದರೆ ಪೊಲೀಸರು ಆರೋಪಿತರು ಮನೆಯ ಹತ್ತಿರ ಇರಲಿಲ್ಲ ಬೇರೆ ಕಡೆ ಇದ್ದರು ಎಂದು ಬರೆದುಕೊಂಡರು.

4. ಜಪ್ತಾದ ಮು.ಮಾ. ಗಳನ್ನು ನೋಡಿದರೆ ಗುರುತಿಸುತ್ತೇನೆ. ರೀಪರ್ ಪಟ್ಟಿ ಈಗಾಗಲೇ ಮು.ಮಾ.1, ಹೊಸ ಸಿಮೆಂಟ್ ಇಟ್ಟಿಗೆ ಚೂರು ಈಗಾಗಲೇ ಮು.ಮಾ.2, ಎರಡು ಹಳೆ ಸಿಮೆಂಟ್ ಇಟ್ಟಿಗೆ ಚೂರು ಈಗಾಗಲೇ ಮು.ಮಾ.3, ಸಿಮೆಂಟ್ ಮಿಶ್ರಿತ ಡಸ್ಟ್ ಈಗಾಗಲೇ ಮು.ಮಾ.4 ಎಂದು ಗುರುತಿಸಲಾಗಿದೆ.

5. ಗಲಾಟೆ ಮಾಡಿದಂತಹ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸ್ವಲ್ಪ ದಿನದ ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಆರೋಪಿತರನ್ನು ತೋರಿಸಿ ಗುರುತಿನ ಬಗ್ಗೆ ನನ್ನ ಹೇಳಿಕೆ ಪಡೆದುಕೊಂಡರು.

(ಆರೋಪಿತರು ಗೈರು ಹಾಜರಾಗಿರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಿ ಮುಂದೂಡಲಾಗಿದೆ.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.